# ಇಂಡೀ ಸಂಗೀತ

## ಹಾಡೊಂದು ಭಾವ ನೂರು!

ಉಮಾ ಅನಂತ್

ಭಾನುವಾರದ ಸಂಜೆಯ ಹೊತ್ತು. ಮೊಬೈಲ್ ತೆಗೆದುಕೊಂಡು ಸುಮ್ಮನೆ ಸ್ಕ್ರಾಲ್ ಮಾಡುತ್ತಿದ್ದಾಗ ರೀಲ್ಸ್‌ನಲ್ಲಿದ್ದ ಒಂದು ಹಾಡು ಥಟ್ಟನೆ ಸೆಳೆಯಿತು. ಕೊಂಚ ಹೊತ್ತು ಹಾಡಿನಲ್ಲೇ ಕಟ್ಟಿಹಾಕಿತು. ಭಾವಬಂಧ ಬೆಸೆಯುವ ಈ ಹಾಡಿನ ಜಾಡು ಹಿಡಿದು ಯೂಟ್ಯೂಬ್ ಲಿಂಕ್ ಕ್ಲಿಕ್ಕಿಸಿ ಕೇಳಿದಾಗ ಇನ್ನೊಮ್ಮೆ, ಮತ್ತೊಮ್ಮೆ ಕೇಳಬೇಕೆನಿಸುವಷ್ಟು ಆಪ್ಯಾಯಮಾನವೆನಿಸಿತು. ಏನಿದು ಇಷ್ಟೊಂದು ಆಕರ್ಷಣೆ? ಯಾವುದಿದು ಹೊಸ ಬಗೆಯ ಸಂಗೀತ? ವಿಭಿನ್ನ ಕಂಪು, ವಿಶಿಷ್ಟ ಮನೋಧರ್ಮ, ಅವ್ಯಕ್ತ ಭಾವನೆಗಳ ಭಾವಭಿತ್ತಿ, ಮಧುರಾತಿಮಧುರ ಅನುಭೂತಿ ಸೃಷ್ಟಿಸುವ ಸಂಗೀತದ ಬಗ್ಗೆ ಕುತೂಹಲ ಕೆರಳಿತು.

ಈ ವಿಭಿನ್ನ ಸಂಗೀತದ ಬಗ್ಗೆ ಇನ್ನಷ್ಟು ಮಾಹಿತಿ ಕಲೆಹಾಕುವಂತೆ ಮನ ಹಾತೊರೆಯಿತು. ಈ ಹಾಡು ಯುವ ಪಾಪ್ ಗಾಯಕ, ಚಿಗುರು ಮೀಸೆಯ ಕಾಲೇಜು ಯುವಕ ತನ್ಮಯ್ ಗುರುರಾಜ್ ತನ್ಮಯನಾಗಿ ಹಾಡಿದ ಕನ್ನಡ 'ಇಂಡೀ ಗೀತೆ'. ಜನವರಿ 2026ರಲ್ಲಿ ಬಿಡುಗಡೆಯಾಗಿ ವೈರಲ್ ಆದ 'ನಿನ್ನ ನೋಟವು...' (**Ninna Notavu**) ಹಾಡು ಸ್ಪಾಟಿಫೈನಲ್ಲಿ ಮಿಲಿಯಗಟ್ಟಲೆ ವೀಕ್ಷಕರನ್ನು

